ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/148/2022-23

ದಿನಾಂಕ 14-09-2022

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 29-08-2022ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:29-08-2022ರಂದು ಅಪರಾಹ್ನ 12-00 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ, ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 06-10-2022ರ ಒಳಗಾಗಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

ಸಭೆಯಲ್ಲಿ ಗೈರುಹಾಜರಾಗಿದ್ದವರು:

| | | |
|---|---|---|
| 1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಡಾ.ಗಿರಿಧರ್ ರಾವ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | – | ಸದಸ್ಯರು |
| 2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | – | ಸದಸ್ಯರು |
| 3. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಎಂ.ಎಲ್.ಎ | – | ಸದಸ್ಯರು |
| 4. ಶ್ರೀ ಪ್ರೀತಂ ಜೆ ಗೌಡ, ಎಂ.ಎಲ್.ಎ | – | ಸದಸ್ಯರು |
| 5. ಶ್ರೀ ಎಂ.ಶ್ರೀನಿವಾಸ್, ಎಂ.ಎಲ್.ಎ | – | ಸದಸ್ಯರು |
| 6. ಶ್ರೀ ಎಲ್.ನಾಗೇಂದ್ರ, ಎಂ.ಎಲ್.ಎ | – | ಸದಸ್ಯರು |
| 7. ಶ್ರೀ. ಎಂ.ಪಿ.ಕುಶಾಲಪ್ಪ, ಎಂ.ಎಲ್.ಸಿ | – | ಸದಸ್ಯರು |
| 8. ಶ್ರೀ ಸಿ.ಎನ್.ಮಂಜೇಗೌಡ, ಎಂ.ಎಲ್.ಸಿ | – | ಸದಸ್ಯರು |
| 9. ಡಾ. ಕೆ.ವಿ.ಸುರೇಶ | – | ಸದಸ್ಯರು |
| 10. ಶ್ರೀಮತಿ ನಾಗರತ್ನಮ್ಮ.ಕೆ | – | ಸದಸ್ಯರು |
| 11. ಡಾ. ಜಿ.ಗೋವಿಂದರಾಜು | – | ಸದಸ್ಯರು |
| 12. ಶ್ರೀ ಹೆಚ್.ಎಸ್.ಗಂಗೇಗೌಡ | – | ಸದಸ್ಯರು |
| 13. ಪ್ರೊ. ಕೆ.ವಿ.ಅಯ್ಯಣ್ಣ | – | ಸದಸ್ಯರು |
| 14. ಡಾ. ಭಾಗ್ಯಲಕ್ಷ್ಮಿ | – | ಸದಸ್ಯರು |
| 15. ಪ್ರೊ. ವೈ.ಬಿ.ಬಸವರಾಜು | – | ಸದಸ್ಯರು |
| 16. ಡಾ. ಸರಸ್ವತಿ, ಗ್ರಂಥಪಾಲಕರು | – | ಸದಸ್ಯರು |
| 17. ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ ಹಾಗೂ ನಿರ್ದೇಶಕರು (ಪ್ರಭಾರ). ಕಾಲೇಜು ಅಭಿವೃದ್ಧಿ ಮಂಡಳ | – | ಸದಸ್ಯರು |
| 18. ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿ | – | ಸದಸ್ಯರು |
| 19. ಶ್ರೀ.ಎಂ.ಪವನ್ ಕುಮಾರ್ | – | ಸದಸ್ಯರು |

ಕುಲಸಚಿವರು ಶಿಕ್ಷಣ ಮಂಡಳಿ ವಿಶೇಷ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ನೇಮಕಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

1. ಶ್ರೀ. ಕುಶಾಲಪ್ಪ, ಎಂ.ಪಿ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಕೊಡಗು.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಇವರ ಪರವಾಗಿ ಡಾ.ಗಿರಿಧರ್ ರಾವ್, ಎಂ.ಎಸ್. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಮೈಸೂರು.

ಹಾಗೂ

ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಶ್ರೀ. ಕೆ.ಸಿ.ವೀರಭದ್ರಯ್ಯ, ನಿವೃತ್ತ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು.
2. ಡಾ.ಜೆ.ಎನ್.ವೆಂಕಟೇಶ್, ಪ್ರಾಂಶುಪಾಲರು, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.
3. ಡಾ.ಬಿ.ರಾಜಣ್ಣ, ಪ್ರಾಂಶುಪಾಲರು, ಪಿ.ಎಲ್.ಎನ್. ಪ್ರಥಮ ದರ್ಜೆ ಕಾಲೇಜು, ಪೂರಿಗಾಲಿ, ಮಂಡ್ಯ ಜಿಲ್ಲೆ.

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳ ಸಭಾಂಗಣದಲ್ಲಿ ದಿನಾಂಕ: 29.08.2022 ರಂದು ಅಪರಾಹ್ನ 12.00 ಗಂಟೆಗೆ ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾಗಿದ್ದ ಸದಸ್ಯರುಗಳು:</u>

1. ಪ್ರೊ.ಜಿ.ಹೇಮಂತ್‌ಕುಮಾರ್, ಕುಲಪತಿಗಳು – ಅಧ್ಯಕ್ಷರು
2. ಡಾ. ನಿರ್ಮಲ.ಹೆಚ್.ಎಂ – ಸದಸ್ಯರು
3. ಡಾ. ವೆಂಕಟೇಶಯ್ಯ – ಸದಸ್ಯರು
4. ಡಾ. ಜಯಶಂಕರ್.ಎನ್ – ಸದಸ್ಯರು
5. ಪ್ರೊ. ಸೌಮ್ಯ ಈರಪ್ಪ.ಕೆ – ಸದಸ್ಯರು
6. ಶ್ರೀ ನಂದೀಶ್.ಎಸ್ – ಸದಸ್ಯರು
7. ಶ್ರೀ ಟಿ.ನಾಗರಾಜು – ಸದಸ್ಯರು
8. ಡಾ. ಪ್ರಶಾಂತ್.ಎಸ್.ಟಿ – ಸದಸ್ಯರು
9. ಶ್ರೀ ಹೆಚ್.ಪಿ.ಶಶಿಕುಮಾರ್ – ಸದಸ್ಯರು
10. ಡಾ. ಬಿಂದು ಅನಿಲ್ ಥಾಮಸ್ – ಸದಸ್ಯರು
11. ಶ್ರೀ ಶಿವಕುಮಾರ್.ಎಂ – ಸದಸ್ಯರು
12. ಶ್ರೀ ಎಂ.ಸಿ.ರಾಜಶೇಖರ್ – ಸದಸ್ಯರು
13. ಪ್ರೊ. ಹೆಚ್. ರಾಜಶೇಖರ್ – ಸದಸ್ಯರು
14. ಪ್ರೊ. ಮುಜಾಫರ್ ಹೆಚ್ ಅಸ್ಸಾದಿ – ಸದಸ್ಯರು
15. ಪ್ರೊ. ಹೆಚ್.ಟಿ.ಬಸವರಾಜಪ್ಪ – ಸದಸ್ಯರು
16. ಪ್ರೊ. ಟಿ.ಆರ್.ಮಾರುತಿ – ಸದಸ್ಯರು
17. ಪ್ರೊ. ಎಸ್.ಮದಿಅಳಗನ್ – ಸದಸ್ಯರು
18. ಪ್ರೊ. ಬಿ.ಶಂಕರ್ – ಸದಸ್ಯರು
19. ಪ್ರೊ. ಎಂ.ಜಿ.ಮಂಜುನಾಥ್ – ಸದಸ್ಯರು
20. ಪ್ರೊ. ಎಂ.ಎಸ್.ಶೇಖರ್ – ಸದಸ್ಯರು
21. ಪ್ರೊ. ಜಿ.ಆರ್.ಜನಾರ್ಧನ – ಸದಸ್ಯರು
22. ಪ್ರೊ. ಗುರುಸಿದ್ದಯ್ಯ, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ – ಸದಸ್ಯರು
23. ಡಾ. ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ – ಸದಸ್ಯರು
24. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವ (ಪರೀಕ್ಷಾಂಗ) – ಸದಸ್ಯರು
25. ಕುಮಾರಿ ಅನುಷಾ.ಪಿ.ಜಿ – ಸದಸ್ಯರು
26. ಕುಮಾರಿ ಮುಸ್ಕನ್ ಭಾನು – ಸದಸ್ಯರು
27. ಶ್ರೀ ರೋಹನ್.ವಿ – ಸದಸ್ಯರು
28. ಕುಮಾರಿ ಅನು.ಎಸ್.ಜೆ – ಸದಸ್ಯರು
29. ಶ್ರೀ ಉದಯ್.ಎಂ.ಎಲ್ – ಸದಸ್ಯರು
30. ಪ್ರೊ. ಶಿವಪ್ಪ,.ಆರ್ – ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿಯ ವಿಶೇಷ ಸಭೆಗೆ ಹಾಜರಾಗಿರುವ ಎಲ್ಲಾ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ನಂತರ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

| | |
|---|---|
| 1. | ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾನಿಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಬೋಧಕರ ಪದೋನ್ನತಿಗಳ ಸಂಬಂಧ, ಮಾದರಿ ಪರಿನಿಯಮಾವಳಿಯನ್ನು ರಚಿಸಿರುವ ಬಗ್ಗೆ. |
| **ತೀರ್ಮಾನ** | **ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾನಿಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಬೋಧಕರ ಪದೋನ್ನತಿಗಳ ಸಂಬಂಧ, ರಚಿಸಿರುವ ಮಾದರಿ ಪರಿನಿಯಮಾವಳಿಯನ್ನು ಸಭೆಯು ಅನುಮೋದಿಸಿತು.** |
| 1 (a) | ವಿಶ್ವವಿದ್ಯಾನಿಲಯಗಳಲ್ಲಿನ ಬೋಧಕ ಹುದ್ದೆಗಳ ಭರ್ತಿ ಮತ್ತು ಪದೋನ್ನತಿಗಳ ಸಂಬಂಧ ಉನ್ನತ ಶಿಕ್ಷಣ ಇಲಾಖೆಯು ಮಾದರಿ ಪರಿನಿಯಮಾವಳಿಯನ್ನು ರಚಿಸಿರುವ ಬಗ್ಗೆ. |
| **ತೀರ್ಮಾನ** | **ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾನಿಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಬೋಧಕರ ಪದೋನ್ನತಿಗಳ ಸಂಬಂಧ, ಮಾದರಿ ಪರಿನಿಯಮಾವಳಿಯಲ್ಲಿ ಪುಟ ಸಂಖ್ಯೆ 10 ರಲ್ಲಿನ 4.1 (1) Bನಲ್ಲಿ ಈ ಕೆಳಕಂಡ ಅಂಶವನ್ನು ತೆಗೆದುಹಾಕಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಲು ಸಭೆಯು ತೀರ್ಮಾನಿಸಿತು.**<br>**"The Academic score as specified in the score card developed by the University shall be considered for short-listing of the candidates for interview only, and the selections shall be based on the performance in the interview".** |
| 2. | ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ 2021-22ನೇ ಸಾಲಿನ (ದಿನಾಂಕ 01-04-2021 ರಿಂದ 31-03-2022ರವರೆಗೆ) ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.** |
| 3. | ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮದ ಬಗ್ಗೆ. |
| **ತೀರ್ಮಾನ** | **ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮದ ಸಲಹಾ ಸಮಿತಿಗೆ ಕುಲಸಚಿವ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನೂ ಸದಸ್ಯರನ್ನಾಗಿ ಮಾಡುವಂತೆ ಸೂಚಿಸಿ ಸದರಿ ಅಧಿನಿಯಮವನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದಿಸಿತು.** |
| 4. | ಶ್ರೀ ಸಿದ್ದರಾಮಯ್ಯ-75 ಅಮೃತಮಹೋತ್ಸವ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೨೦೦೦ರ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.೮೦ರಷ್ಟು ಬಡ್ಡಿ ಹಣವನ್ನು B.A.LLB in 5 years degreeಪರೀಕ್ಷೆಯಲ್ಲಿ ಅಧ್ಯಯನ ಮಾಡಿ ಪ್ರಥಮ ಬಾರಿಗೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಸಿದ್ದರಾಮಯ್ಯ-75 ಅಮೃತಮಹೋತ್ಸವ ಚಿನ್ನದ ಪದಕ" ದತ್ತಿಯನ್ನು ಸ್ಥಾಪನೆ ಮಾಡಲು ಸಭೆಯು ಅನುಮೋದಿಸಿತು. |
| 5. | 'Prof.B.S.Vishwanath, Prof. R.Manjunath Kini and Prof.T.Veerabasappa Gowda Endowment Lectures on Progress in Biological Sciences' ಎಂಬ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೨೦೦೦ರ ಅನ್ವಯ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.೨೦ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.೮೦ರಷ್ಟು ಬಡ್ಡಿ ಹಣದಲ್ಲಿ ಕೆಲವು ಷರತ್ತುಗಳನ್ನು ಅಳವಡಿಸಿಕೊಂಡು ವಿಭಾಗದಲ್ಲಿ "Prof.B.S.Vishwanath, Prof. R.Manjunath Kini and Prof.T.Veerabasappa Gowda Endowment Lectures on Progress in Biological Sciences" ಎಂಬ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪಿಸಲು ಸಭೆಯು ಅನುಮೊದಿಸಿತು. |

ಇತರೆ ವಿಷಯಗಳು:

1. ಪ್ರಾಧ್ಯಾಪಕರಿಗೆ ಹಲವು ಸರ್ಕಾರಿ/ಖಾಸಗಿ ಸಂಘ ಸಂಸ್ಥೆಗಳು ನೀಡುವ ಪ್ರಶಸ್ತಿಯನ್ನು ಸಹ ಪರಿಗಣಿಸಿ ಶೈಕ್ಷಣಿಕ ದಾಖಲೆಯಲ್ಲಿ ಅಂಕಗಳನ್ನು ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ಹಲವು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

2. ಪ್ರೊ. ಮುಜಾಫರ್ ಹೆಚ್ ಅಸ್ಸಾದಿರವರು ಮಾತನಾಡಿ, ಪ್ರಾಧ್ಯಾಪಕರಿಗೆ ನೀಡಲಾಗುವ ಪಂಪ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿಯನ್ನು ಸಹ ಪರಿಗಣಿಸಿ ಶೈಕ್ಷಣಿಕ ದಾಖಲೆಯಲ್ಲಿ ಅಂಕಗಳನ್ನು ನೀಡಬೇಕೆಂದು ಮನವಿ ಮಾಡಿದರು.

3. ಇನ್ನು ಮುಂದೆ ಅತಿಥಿ ಉಪನ್ಯಾಸಕರನ್ನು ವಿಶ್ವವಿದ್ಯಾನಿಲಯದಲ್ಲಿ ನೇಮಕ ಮಾಡಲು ಕಡ್ಡಾಯವಾಗಿ ಸಂದರ್ಶನ ನಡೆಸಲಾಗುವುದೆಂದು ಹಾಗೂ ಸಂದರ್ಶನವಿಲ್ಲದೇ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರಿಗೆ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುವುದೆಂದು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು. ಕೋವಿಡ್-19 ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಿರುವ ಸಂದರ್ಶನ ಮೂಲಕ ನೇಮಕಾತಿಯಾಗದೆ ಇರುವ ಅತಿಥಿ ಉಪನ್ಯಾಸಕರ ಸೇವಾವಧಿಯನ್ನು ಪರಿಗಣಿಸುವಂತೆ ಶ್ರೀ. ಹೆಚ್. ಪಿ.ಶಶಿಕುಮಾರ್ ರವರು ಮನವಿ ಮಾಡಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಸದರಿ ಅತಿಥಿ ಉಪನ್ಯಾಸಕರ ಸೇವಾವಧಿಯನ್ನು ಪರಿಗಣಿಸಲಾಗುವುದೆಂದು ತಿಳಿಸಿದರು. ಮುಂದುವರೆದು, "ಅತಿಥಿ ಉಪನ್ಯಾಸಕರುಗಳು ನೇಮಕಾತಿ ವರ್ಷ, ಆಯಾ ವಿಷಯದಲ್ಲಿ ಕನಿಷ್ಠ ಒಂದು ಸಂಶೋಧನಾ ಲೇಖನವನ್ನು SCOPUS ಅಥವಾ Web of Scienceನ Journal ಗಳಲ್ಲಿ ಪ್ರಕಟಿಸುವುದು ಮತ್ತು ವಿಶ್ವವಿದ್ಯಾನಿಲಯಕ್ಕೆ ಮಾಹಿತಿಗಾಗಿ ಸಲ್ಲಿಸುವಂತೆ ಷರತ್ತನ್ನು ಜಾರಿಗೆ ತರಲಾಗುವುದೆಂದು ತಿಳಿಸಿದರು. ಮುಂದುವರೆದು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಸಹ ಪರಿಗಣಿಸಲಾಗುವುದೆಂದು ತಿಳಿಸಿದರು.

4. ಶ್ರೀ.ಹೆಚ್.ಪಿ ಶಶಿಕುಮಾರ್ ರವರು ಮಾತನಾಡಿ, ಬ್ಯಾಕ್‌ಲಾಗ್, ಹೈದ್ರಾಬಾದ್-ಕರ್ನಾಟಕದವರಿಗೆ ಮೀಸಲಾಗಿರುವ ಹುದ್ದೆಗಳೊಂದಿಗೆ ಸಾಮಾನ್ಯ ವರ್ಗದವರಿಗೂ ಸಹ ಬೋಧಕ ಹುದ್ದೆಗಳಿಗೆ ತುರ್ತಾಗಿ ಖಾಯಂ ನೇಮಕಾತಿ ಮಾಡುವ ಸಂಬಂಧ ಸರ್ಕಾರದಿಂದ ಅನುಮೋದನೆ ಪಡೆಯಲು ಸಲಹೆ ನೀಡಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ ನಾವು ಎಲ್ಲಾ ಮಾಹಿತಿಗಳನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿದ್ದು ಹಾಗೂ ಆರ್ಥಿಕ ಇಲಾಖೆಗೂ ಸಹ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

5. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2004 ರಿಂದ ಇದುವರೆವಿಗೂ ಅಧ್ಯಾಪಕರ ಜೇಷ್ಠತಾ ಪಟ್ಟಿ ಹಾಗೂ ಹಿರಿಯ ಶ್ರೇಣಿಪಟ್ಟಿಯನ್ನು ಸಿದ್ಧಪಡಿಸಿರುವುದಿಲ್ಲವೆಂದುಪ್ರೊ. ಹೆಚ್.ಟಿ. ಬಸವರಾಜಪ್ಪ ಅವರು ಸಭೆಯ ಗಮನಕ್ಕೆ ತಂದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ ಎಲ್ಲಾ ಡೀನರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗುವುದೆಂದು, ಸದರಿ ಸಮಿತಿಗೆ ಹಿರಿಯ ಡೀನ್‌ರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದೆಂದು ತಿಳಿಸಿದರು. ಕುಲಸಚಿವರು ಮಾತನಾಡಿ ಎಲ್ಲಾ ಡೀನರು, ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಒಬ್ಬರು ಸದಸ್ಯರು, ಇಬ್ಬರು ಸಿಂಡಿಕೇಟ್ ಸದಸ್ಯರು ಹಾಗೂ ಇಬ್ಬರು ಶೈಕ್ಷಣಿಕ ಮಂಡಳಿಯ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

6 ಶ್ರೀ ಟಿ. ನಾಗರಾಜು ರವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ. ಸಾವರ್ಕರ್ ಅಧ್ಯಯನ ಪೀಠವನ್ನು ಸ್ಥಾಪನೆ ಮಾಡುವಂತೆ ಸಭೆಯ ಗಮನಕ್ಕೆ ತಂದರು ಇದಕ್ಕುತ್ತರವಾಗಿ ಮಾನ್ಯ ಕುಲಸಚಿವರು ಮಾತನಾಡಿ, ಸರ್ಕಾರವು ಈಗಾಗಲೇ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಶ್ರೀ.ಸಾವರ್ಕರ್ ಅಧ್ಯಯನ ಪೀಠವನ್ನು ಸ್ಥಾಪನೆ ಮಾಡಲು ಅನುಮತಿ ನೀಡಿರುತ್ತಾರೆ, ವಿಶ್ವವಿದ್ಯಾನಿಲಯಗಳ ಕಾಯ್ದೆಯಾನುಸಾರ ಒಂದು ವಿಶ್ವವಿದ್ಯಾನಿಲಯಕ್ಕೆ ಮಾತ್ರ ಅವಕಾಶವಿರುವುದೆಂದು ಸಭೆಯ ಗಮನಕ್ಕೆ ತಂದರು, ಮಾನ್ಯ ಸದಸ್ಯರು ಮುಂದುವರೆದು ಮಾತನಾಡಿ ವಿಶ್ವವಿದ್ಯಾನಿಲಯದ ವತಿಯಿಂದ ಅಧ್ಯಯನ ಪೀಠ ಸ್ಥಾಪನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಸಲಹೆ ನೀಡಿದರು,

ಅಂತಿಮವಾಗಿ, ಕುಲಸಚಿವರು ಸಭೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದಂತಹ ಎಲ್ಲಾ ಶಿಕ್ಷಣ ಮಂಡಳಿ ಸದಸ್ಯರುಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಸಹಿ/-
ಕುಲಪತಿ ಹಾಗೂ ಅಧ್ಯಕ್ಷರು.